

# ಓದುಗರಿಲ್ಲದ ಊರಲ್ಲಿ...

ಸಾಹಿತ್ಯಕೃತಿಗಳಿಗೆ ಓದುಗರಿಲ್ಲ ಎಂಬ ಆರೋಪವನ್ನು ಆಗಾಗ ಲೇಖಕರು, ಪ್ರಕಾಶಕರು ಮಾಡುತ್ತಿರುತ್ತಾರೆ. ಈ ಆತಂಕ ಕೊಂಚ ಮಟ್ಟಿಗೆ ನಿಜ; ಅದು ಹಳೆಯದು ಕೂಡ. ಸಿನಿಮಾ ತಾರೆಯರು ಪಾತ್ರಗಳನ್ನು ಆಯ್ದುಕೊಳ್ಳುವಂತೆ ವಾಚಕ ಮಹಾಶಯರೂ ಈಗೀಗ ತಮ್ಮ ಆಯ್ಕೆಯಲ್ಲಿ ಚೂಸಿ ಆಗಿರಬಹುದು. ಇಲ್ಲವೇ ಸಮಯ ತಿನ್ನುವ ಕೃತಿಗಳನ್ನು ಯಾಕಾದರೂ ಓದಬೇಕು ಎಂಬುದು ಅವರ ನಿಲುವಾಗಿರಲಿಕ್ಕೂ ಸಾಕು. ಓದುಗರೆಂದರೆ ಯಾರು? ಎಷ್ಟು ಜನ? ಯಾವ ತರಹದವರು? ಹಿನ್ನೆಲೆ ಏನು? ಎಂಬುದು ಯಾವತ್ತಿಗೂ ಅಮೂರ್ತವೇ. ಸಿಕ್ಕಿದ ಎಲ್ಲವನ್ನೂ ಹೀರುವ ಆದರ್ಶ ಓದುಗರು ಈಗ ಇರಲಿಕ್ಕಿಲ್ಲ. ಕೆಲವರು ಕಾದಂಬರಿ, ಕತೆ, ಅಧ್ಯಾತ್ಮ, ಪ್ರವಾಸಗಳಿಗೆ, ಇನ್ನು ಕೆಲವರು ಪತ್ರಿಕೆಗೆ ಸೀಮಿತಗೊಂಡಿರುತ್ತಾರೆ.

ಮನರಂಜನೆಗೆ, ಮಾಹಿತಿಗೆ, ಅಕಡೆಮಿಕ್ ಅಧ್ಯಯನಕ್ಕೆ ಹೀಗೆ ಓದಿನ ಉದ್ದೇಶಗಳು ಹಲವಾರು. ಅನೇಕರ ವಿದ್ಯಾಭ್ಯಾಸ ಮುಗಿಯುತ್ತಿದ್ದಂತೆ ಅವರ ಹಾಗೂ ಪುಸ್ತಕಗಳ ನಡುವಿನ ಸಂಬಂಧ ತೀರುತ್ತದೆ. ಅದಕ್ಕೆ ಆಚೀಚೆ ನೋಡದೆ ಜೀವನವನ್ನು ರೂಪಿಸಿಕೊಳ್ಳುವಂತೆ ಸಮಾಜ ನಮಗೆ ಹಾಕಿರುವ ಕಣ್ಣುಪಟ್ಟಿಯಂತಹ ಶಿಕ್ಷಣವೂ ಕಾರಣವಿರಬೇಕು. ಹೀಗಾಗಿ ಮುಂದೆ ತೆರೆದುಕೊಳ್ಳಬಹುದಾದ ದೊಡ್ಡ ಜಗತ್ತು, ಆತ್ಮಕ್ಕೆ ಹೊತ್ತಿಕೊಳ್ಳಬಹುದಾದ ಕಿಡಿ ಅಲ್ಲಿಗೆ ಮರೆಯಾಗುತ್ತದೆ.

ಓದು ಮನುಷ್ಯನಿಗೆ ಸಹಜವಲ್ಲ. ಮರ ಹತ್ತುವುದು, ಮೀನು ಹಿಡಿಯುವುದು, ಈಜುವುದು ಮನುಷ್ಯನ ಸಹಜ ಕ್ರಿಯೆ. ಓದದವನಲ್ಲೂ ವ್ಯವಹಾರಜ್ಞಾನ, ತಿಳಿವಳಿಕೆ, ಪ್ರಖರವಾಗಿರುತ್ತದೆ. ಜೀವನವನ್ನು ರೂಪಿಸಲು ಓದು ಬೇಕೇ ಹೊರತು, ಅದೇ ಎಲ್ಲವೂ ಆಗ ಕೂಡದು. ಬದುಕಿನ ಅನುಭವವಾಗದ ಓದಿನಿಂದ ವ್ಯಕ್ತಿತ್ವಕ್ಕೆ ಅಂತಹ ನೆರವು ಸಿಗಲಾರದು. ಅದು ದೈನಿಕದ ಧ್ಯಾನವಾದಾಗ ನಮ್ಮ ಮನದ ಎಲ್ಲೆಗಳನ್ನು ವಿಸ್ತರಿಸಬಹುದು; ನಮ್ಮನ್ನು ನಾವು ಕಂಡುಕೊಳ್ಳುವಂತೆ ಮಾಡಬಹುದು.

'ನಾನು ಸಾಕಷ್ಟು ಓದಿದ್ದೇನೆ, ಅದರಿಂದಾಗಿಯೇ ದೊಡ್ಡವನು' ಎಂಬ ಅಹಂಕಾರ, ಸ್ವಪ್ರತಿಷ್ಠೆಯ ಓದು ವ್ಯರ್ಥ. ಅಹಂಕಾರ ಕಳೆಯಲೆಂದೇ ಓದಿನಂತಹ ಕ್ರಿಯಾಶೀಲ ತೊಡಗುವಿಕೆ ಬೇಕಾಗುತ್ತವೆ. ಓದಿನ ಅಭಿರುಚಿಯನ್ನು ವಿಶ್ವವಿದ್ಯಾಲಯಗಳಾಗಲಿ, ಅಧ್ಯಾಪಕರಾಗಲಿ ಕಲಿಸುತ್ತಿಲ್ಲ. ಓದಿನಿಂದ ಆಗುವ ರೋಮಾಂಚನ, ಎಲ್ಲೂ ಸಿಗದ ವಿಶಿಷ್ಟ ಆನಂದ ಈ ಅಧ್ಯಾಪಕರಿಗೂ ಸಿಕ್ಕಿರುವುದಿಲ್ಲ. ಅಂಥ ಅಧ್ಯಾಪಕರು ಓದಿನಿಂದ ಸಿಗುವ ಖುಷಿಯ ಬಗ್ಗೆ ಶಿಷ್ಯರಿಗೂ ಆಸಕ್ತಿ ಹುಟ್ಟಿಸಲಾರು. ಆರಂಭವೇ ಸರಿ ಇಲ್ಲದ ಮೇಲೆ ಸಾಹಿತ್ಯಕೃತಿಗಳನ್ನು ಯಾರೂ ಓದುವುದಿಲ್ಲ ಎಂಬ ದೂರಿಗೆ ಯಾವ ಅರ್ಥವೂ ಇಲ್ಲ.

ಕನ್ನಡ ಸಂಸ್ಕೃತಿ ಇಲಾಖೆ, ಪುಸ್ತಕ ಪ್ರಾಧಿಕಾರ, ಅಕಾಡೆಮಿಗಳು, ವಿಶ್ವವಿದ್ಯಾಲಯಗಳು ಸಂಸ್ಕೃತಿಯನ್ನು ಬೆಳೆಸುವ ಭ್ರಮೆಯಲ್ಲಿ ಲಾಟುಗಟ್ಟಲೆ ಪುಸ್ತಕಗಳನ್ನು ಪ್ರಕಟಿಸುತ್ತ ಬಂದಿವೆ. ಹೀಗೆ ಪ್ರಕಟಿಸುವ ಬದಲು ಅವು ಪುಸ್ತಕಗಳ ಓದಿನ ವಾತಾವರಣವನ್ನು ಸೃಷ್ಟಿಸುವ ಕೆಲಸವನ್ನು ಮೊದಲು ಮಾಡಬೇಕು. ಅದಕ್ಕೀಗ ಸರಿಯಾದ ಸಮಯ.

**ಸಂದೀಪ ನಾಯಕ**